(6ನೇ ಪುಟದಿಂದ)
ಎ.ಜಿ. ಲಕ್ಷ್ಮೀನಾರಾಯಣ್, ಎಂ.ಎನ್. ಜಯಕುಮಾರ್ ಮತ್ತು ಡಾ. ಮನೋಜ್ ಸಿ. ಸಿಂದಗಿ ನಿರ್ಣಾಯಕರಾಗಿದ್ದರು. 16 ದೇಶಗಳ 3639 ಛಾಯಾಚಿತ್ರಗಳು ಸ್ಪರ್ಧೆಗೆ ಬಂದದ್ದು ವಿಶೇಷ. ವಿಜೇತ ಛಾಯಾಚಿತ್ರಗಳ ಅಪೂರ್ವ ಪ್ರದರ್ಶನವು ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಆಗಸ್ಟ್ 17ರಿಂದ 19ರವರೆಗೆ ನಡೆಯಲಿದೆ.

ಪ್ರಶಸ್ತಿವಿಜೇತ ಕೆಲವು ಛಾಯಾಗ್ರಹಣಗಳ ವೈವಿಧ್ಯ ಗಮನ ಸೆಳೆಯುತ್ತವೆ. ಇಲ್ಲಿರುವ ಒಂದೊಂದು ಫೋಟೋಗಳದ್ದೂ ಒಂದೊಂದು ವಿಶೇಷ. ರಾತ್ರಿಯ ಆಕಾಶದಲ್ಲಿ ಕ್ಷೀರಪಥ (Milky Way) ಬರಿ ಕಣ್ಣಿಗೆ ಸ್ಪಷ್ಟವಾಗಿ ಕಾಣುವುದು ವಿರಳ. ಈ ದೃಶ್ಯವನ್ನು ಅತಿ ದೊಡ್ಡ ಫೋಕಲ್ ಲೆಂಗ್ತ್ ನ ಟೆಲಿ– ಜೂಂ ಲೆನ್ಸ್ ಅಳವಡಿಸಿದ ಕ್ಯಾಮೆರಾದಲ್ಲಿ ಇಲ್ಲಿನಂತೆ ದಾಖಲಿಸಲು ಸಾಧ್ಯ. ಬರಿದೇ ಆಗಸಕ್ಕೇ ಕ್ಯಾಮೆರಾ ಮುಖ ಮಾಡದೇ, ಭೂಮಿಯ ಮೇಲಂಚಿನ ಭಾಗಗಳನ್ನೂ, ಬೆಳೆದು ನಿಂತ ಕ್ಯಾಕ್ಟಸ್ ಮರವೊಂದನ್ನು ಯಾವುದೋ ದೀಪದಿಂದ ಬೆಳಗಿಸಿ, ಚೌಕಟ್ಟಿನ ಆಕರ್ಷಕ ಭಾಗದಲ್ಲಿರಿಸಿ ದಿಗಂತದ ಮತ್ತು ಆಗಸದ ಅನನ್ಯ ಭಾವವನ್ನು ಮೂರು ಆಯಾಮದಲ್ಲಿ ಮೂಡಿಸಿರುವುದು ಈ ಚಿತ್ರಣದ ಹೆಚ್ಚಳ.

ವನ್ಯಜೀವಿ ತಾಣಗಳಲ್ಲಿ ದೂರ ದೂರದ ಹೆಜ್ಜೆಯಿಟ್ಟು ವಿಹರಿಸುವ ಬಹು ಎತ್ತರದ ಜಿರಾಫೆಗಳನ್ನು ಬಹು ದೂರದಿಂದಲೇ ಸಿಲೋಎಟ್ ತಂತ್ರದಿಂದ ಸಂಯೋಜಿಸಿ ಇಲ್ಲಿನಂತೆ ಪರಿಸರವನ್ನೂ ಸೇರಿಸಿ ಸುಂದರವಾಗಿ ಸೆರೆಹಿಡಿಯುವುದು ನಿಜಕ್ಕೂ ಕ್ಲಿಷ್ಟಕರ ಪ್ರಯತ್ನ. ಚೌಕಟ್ಟಿನ ಎಡಭಾಗದ ಒಂದು ಮೂರಾಂಶದಲ್ಲಿ ಕಪ್ಪು ವಸ್ತ್ರಧಾರಿಯ ಸಂಚಲನ, ಅದಕ್ಕೆ ಪೂರಕವಾಗಿ ಓರೆಯಾದ ರೇಖಾ ವಿನ್ಯಾಸ ಮತ್ತು ಕಾಂತಿಭೇಧ ಚಿತ್ರದ ಮೌಲ್ಯವನ್ನು ಹೆಚ್ಚಿಸಿದೆ.

ಕಟ್ಟಡಗಳ ಭಾಗಗಳು ನಿಶ್ಚಲವಾಗಿದ್ದರೂ ನವಿರಾದ, ಬಳುಕಾದ ಬೆಳಗಿದ ನೆಲದ ಮೇಲಿನ ಎಳೆಗಳು ಕುತೂಹಲಕಾರಿಯಾದ ಆಯಾಮವನ್ನು ಸೃಷ್ಟಿಸಿರುವುದು, ಜೊತೆಗೆ ಸೂಕ್ತವಾದ ಎಡ ಜಾಗದಲ್ಲಿ ಸಾಗುತ್ತಿರುವ ಸೈಕಲ್ ಸವಾರನ ಭಂಗಿಯ ಎದುರು ಸಾಕಷ್ಟು ರಿಲೀಫ್ ಇಟ್ಟಿರುವುದು ಚಿತ್ರಣದ ಜೀವಂತಿಕೆಯನ್ನು ಹೆಚ್ಚಿಸಿವೆ.

ದಟ್ಟ ಅರಣ್ಯದಲ್ಲಿ ನೀರಿನಾಶ್ರಯ ಅರಸಿ ಬಂದ ಪ್ರಾಣಿಯನ್ನು ಕಚ್ಚಿ ಹಿಡಿದ ಪಟ್ಟೆ ಹುಲಿಯ ಆ್ಯಕ್ಷನ್, ಪ್ರಾಣಿಯ ಅಸಹಾಯಕತೆ ಮತ್ತು ಸುತ್ತಲ ಸಹಜ ಪರಿಸರದ ಗಂಭೀರತೆ ಎಲ್ಲ ಸೇರಿ ಕತೆಯೊಂದನ್ನು ಹೇಳುವಂತಿದೆ.

ಸಜಾತಿ ಭಕ್ಷಕ ಕೀಟವೊಂದು ತನ್ನದೇ ತಳಿಯ ಮತ್ತೊಂದು ಕೀಟವನ್ನು ಕಚ್ಚಿ ಎಳೆದು ಸಾಗುವ ಈ ದೃಶ್ಯ, ಸೂಕ್ತವಾದ ಮ್ಯಾಕ್ರೋ ಲೆನ್ಸ್ ಅಳವಡಿಸಿದ ಉತ್ತಮ ಗುಣಮಟ್ಟದ ಕ್ಯಾಮೆರಾದಲ್ಲಿ ಸೆರೆಹಿಡಿದ ಚಿತ್ರ,

ಚಿಣ್ಣರ ಹಾರಾಟ, ನೀಲಾಕಾಶದೆದುರು ಮಂಜಿನಲ್ಲಿ ನುಸುಳುತ್ತಿರುವ ಬಿಸಿಲು ಕೋಲುಗಳು, ಹಿಂಬೆಳಕಲ್ಲಿ ಬೆಳಗುತ್ತಾ ಎದ್ದ ಧೂಳಿನ ಹರವು, ಪುಟಾಣಿಗಳ ಕೆಂಪು ವಸ್ತ್ರಗಳ ಮಾಟ, ಅವರೆಲ್ಲರ ಆಹ್ಲಾದದ ಮುಖಚರ್ಯೆ ಚಿತ್ರದ ಮೋಹಕತೆಗೆ ಮೆರುಗು ನೀಡಿವೆ.

ಹೆಂಗಳೆಯರ ಆತ್ಮೀಯವಾದ ಸಂತಸದ ಸಮಯವನ್ನು, ಅವರವರ ಭಾವಗಳ ತಲ್ಲೀನತೆಯಲ್ಲಿ, ಬಿಸಿ ಆವಿಯ ಪರಿಸರದ ಮಂದ ಬೆಳಕಿನಲ್ಲಿ ಅವರಿಗರಿವಿಲ್ಲದೇ ಸೆರೆಹಿಡಿದ ಒಂದು 'ಕ್ಯಾಂಡಿಡ್' ಕ್ಷಣ.

ಬೃಹತ್ ಗಾತ್ರದ ವನ್ಯಜೀವಿಯೊಂದರ ಮರಿಗಳೊಂದಿಗಿನ ಖಾಸಗಿ ಸಮಯದ ಫೋಟೋ ಅದ್ಭುತವಾಗಿದೆ. ಉತ್ತಮವಾದ ಬೆಳಕಿನಲ್ಲಿ ಪ್ರಕೃತಿಯ ಸುಂದರ ಹಿನ್ನೆಲೆಯಲ್ಲಿ ಸ್ವಚ್ಛಂದ ಓಟವನ್ನು ದೂರದಿಂದ ಮನೋಜ್ಞವಾಗಿ ಚಿತ್ರಿಸಲಾಗಿದೆ.



